**ಸಾಕ್ಷಿಯನ್ನು ದಿಃ 05.11.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಹೆಸರು ಭವ್ಯ. ತಂದೆ ಹೆಸರು ವೆಂಕಟೇಶ್ ಜೋಗಿ. ನಾನು ಅಪಘಾತ ಸ್ಥಳದಲ್ಲಿದ್ದೆ. ಅಪಘಾತದ ನಂತರ ಕಂಪನಿಯ ತನಿಖಾಧಿಕಾರಿ ನಮ್ಮ ಮನೆಗೆ ಬಂದಿದ್ದರು ಎಂದರೆ ಸರಿಯಲ್ಲ. ನಾನು ಕಂಪನಿಯ ಅಧಿಕಾರಿಯ ಬಳಿ ಅಪಘಾತದ ವಿಚಾರವನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ವೀಡಿಯೋ ರೆಕಾರ್ಡಿಂಗ್ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ವಾಹನ ಚಲಾಯಿಸುತ್ತಿದ್ದವರು ಎಸ್.ಆರ್ ಕುಮಾರ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ವಯಸ್ಸಾಗಿತ್ತು ಎನ್ನುತ್ತಾರೆ. ಕಂಪನಿಯ ತನಿಖಾಧಿಕಾರಿಗೆ ಆಟೋವನ್ನು ಎಸ್.ಆರ್ ಕುಮಾರ್ ಎನ್ನುವವರು ಚಲಾಯಿಸುತ್ತಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆಟೋ ಮಾಲೀಕರು ಪೋಲೀಸರೊಂದಿಗೆ ಶಾಮಿಲಾಗಿ ನವರತ್ನ ಕುಮಾರ್ ಎನ್ನುವವರು ಆಟೋ ಚಲಾಯಿಸುತ್ತಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ಎಸ್. ಕುಮಾರ್ ಎನ್ನುವವರು ಆಟೋ ಚಲಾಯಿಸುತ್ತಿದ್ದು ಅವರಿಗೆ ಚಾಲನ ಪರವಾನಗಿ ಇಲ್ಲದ ಕಾರಣ ನವರತ್ನ ಕುಮಾರ್ ಎನ್ನುವವರನ್ನು ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸುಳ್ಳು. ಅರ್ಜಿದಾರರಿಗೆ ಪರಿಹಾರ ಸಿಗಲಿ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಮಾ ತನಿಖಾಧಿಕಾರಿಯವರ ಬಳಿ ನನ್ನ ಹೇಳಿಕೆಯನ್ನು ರೆಕಾರ್ಡ್ ಮಾಡಿದ ಸಿ.ಡಿ. ಇದ್ದು ಆ ಪ್ರಕಾರ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ನಮ್ಮಲ್ಲಿ ಯಾರು ಬಂದಿಲ್ಲ ಎನ್ನುತ್ತಾರೆ. 1 ನೇ ಎದುರುದಾರರು ಹಾಗೂ ನಾನು ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.